**ಓ.ಎಸ್.ನಂಬ್ರ: 273/2023 ಪಿ.ಡಬ್ಲ್ಯೂ :1**

ದಿನಾಂಕಃ 20-09-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು

**ಪಾಟಿ ಸವಾಲುಃ ಶ್ರೀ ಎಮ್.ಎಸ್.ಎಸ್. ವಕೀಲರಿಂದ**

ನಾನು ಎಸ್.ಎಸ್. ಎಲ್.ಸಿ ವರೆಗೆ ವಿದ್ಯಾಬಾಸ ಮಾಡಿರುತ್ತೇನೆ. ನಾನು ಚಿನ್ನದ ಕೆಲಸ ಮಾಡುತ್ತೇನೆ. ಯಡ್ತರೆ ಗ್ರಾಮದ ಸರ್ವೇ ನಂಬ್ರ 163/18ರಲ್ಲಿ 10ವರೆ ಸೆಂಟ್ಸ ಸ್ಥಳ ನನ್ನ ಪಟ್ಟ ಸ್ಥಳ. ಸದ್ರಿ ಜಾಗ ನನ್ನ ಸ್ವಾಧಿನದಲ್ಲಿರುತ್ತದೆ. ನಾನು ಮೂಲತ ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲೂಕಿನವರು ಅಂದರೆ ಸರಿಯಲ್ಲ. ಭಟ್ಕಳ ತಾಲೂಕಿನಲ್ಲಿ ನನ್ನ ತಂದಗೆ ಪಿತ್ರಾರ್ಜಿತ ಆಸ್ತಿ ಇರುವುದಿಲ್ಲ.

2. ಶಿರೂರು ಗ್ರಾಮದ ಸರ್ವೆ ನಂಬ್ರ 63/2ಎರಲ್ಲಿ 9 .18 ಸೆಂಟ್ಸ ಸ್ತಳ ಸರ್ಕಾರಿ ಸ್ತಳ ಎಂದರೆ ಸರಿ. ಪಹಣಿ ಪತ್ರಿಕೆಯಲ್ಲಿ ಸರ್ಕಾರಿ ಅನಾದಿ ಎಂದು ಬರೆದಿರುತ್ತದೆ ಎಂದರೆ ಸರಿ. ಆರ್.ಟಿ.ಸಿ.ಯ ಕಲಂ ನಂ.11 ರಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಮೀಸಲಿರುವ ಸ್ಥಳ ಎಂದು ಬರೆದಿದೆ ಎಂದರೆ ಸಾಕ್ಷಿಯು ಮಧ್ಯದಲ್ಲಿ ಆರ್.ಟಿ.ಸಿ.ಯಲ್ಲಿ ಸೇರಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಸರ್ವೇ ನಂಬ್ರನ ಕೈ ಬರಹದ ಆರ್.ಟಿ.ಸಿ. ಮತ್ತು ಅಡಂಗಲನ್ನು ನಾನು ನೋಡಿರುವುದಿಲ್ಲ. ಕೈ ಬರಹದ ಆರ್.ಟಿ.ಸಿ. ಮತ್ತು ಅಡಂಗಲನಲ್ಲಿ ಕೂಡಾ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಮೀಸಲಿಟ್ಟ ಸ್ಥಳ ಎಂದು ಸ್ಪಷ್ಟವಾಗಿ ಬರೆದಿರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. 1952 ನೇ ಇಸವಿಯಲ್ಲಿ ಭೂ ರಹಿತ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಮೀಸಲಿಟ್ಟು ಸರಕಾರ ಆದೇಶ ಮಾಡಿರುತ್ತದೆ ಎಂದರೆ ಗೊತ್ತಿಲ್ಲ. ಎಲ್ಲಾ ಮೂಲ ದಾಖಲೆಗಳನ್ನು ಪರಿಶೀಲಿಸಿ ಜಿಲ್ಲಾಧಿಕಾರಿಯವರು ದಿಃ 11-11-2011 ರಂದು ಡಿ.ಸಿ. ಮನ್ನಾ ಭೂಮಿ ಎಂದು ಆದೇಶ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಮಾಡಿರಬಹುದು ಎಂದು ನುಡಿಯುತ್ತಾರೆ. ಸಾಕ್ಷಿಯು ಸ್ವತಃ ನುಡಿಯುತ್ತಾರೆ ಸದರಿ ಜಾಗದಲ್ಲಿ ನಾನೇ 1964 ನೇ ಇಸವಿಯಿಂದ ವಾಸ್ತವ್ಯ ಇದ್ದೆನೆ. ಡಿ.ಸಿ.ಯವರ ಆದೇಶ ಆರ್.ಟಿ.ಸಿ.ಯ ಕಲಂ 11 ರಲ್ಲಿ ಕಂಡುಬರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಸದರಿ ಭೂಮಿಯನ್ನು ಗುರುತಿಸಲು ಬೈಂದೂರು ತಹಶೀಲ್ದಾರರು ದಿಃ 02-01-2012 ರಂದು ಸರ್ವೇಯರ್ ಮತ್ತು ಕಂದಾಯ ಇಲಾಖೆಯವರಿಗೆ ಆದೇಶ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ತಹಶೀಲ್ದಾರರ ಆದೇಶದನ್ವಯ ಸರ್ವೇಯರ್ ಮತ್ತು ಕಂದಾಯ ಇಲಾಖೆಯವರು ಸದರಿ ಸ್ಥಳದ ಗಡಿ ಗುರುತನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. 2012 ನೇ ಇಸವಿಯ ನಂತರ ಜಿಲ್ಲಾಧಿಕಾರಿಯವರು ಶಿರೂರು ಮತ್ತು ಬೈಂದೂರಿನ ಪರಿಶಿಷ್ಟ ಜಾತಿ ಮತ್ತು ಪಂಗಡದವರ ಕೋರಿಕೆಯ ಪ್ರಕಾರ ಇನ್ನೊಂದು ಆದೇಶ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ದಿಃ 24-06-2022 ರಂದು ಸದರಿ ಆಸ್ತಿಯನ್ನು ಹಂಚಲು

ಸಹಾಯಕ ಕಮೀಷನರ್ ರವರು ಆದೇಶ ಮಾಡಿರುತ್ತಾರೆ ಎಂದರೆ ಸರಿಯಲ್ಲ. ತಹಶೀಲ್ದಾರವರು ಸದರಿ ಸ್ಥಳವನ್ನು ಗುರುತಿಸಿ ಹಂಚಲು ಪ್ರಕ್ರಿಯೆಯನ್ನು ಪ್ರಾರಂಭಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸ್ಥಳವನ್ನು ಅನಧಿಕೃತವಾಗಿ ಒತ್ತುವರಿ ಮಾಡಿರುವ ಬಗ್ಗೆ ತಹಶೀಲ್ದಾರರು ಹಾಗು ಗ್ರಾಮ ಪಂಚಾಯತ್ ನವರು ನೋಟೀಸನ್ನು ನೀಡಿರುತಾರೆ ಎಂದರೆ ಸರಿಯಲ್ಲ. ನನಗೂ ಕೂಡಾ ತಹಶೀಲ್ದಾರರು ಹಾಗು ಗ್ರಾಮ ಪಂಚಾಯತ್‌ನವರು ನೋಟೀಸನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನೋಟೀಸನ್ನು ನೀಡಿರುತ್ತಾರೆ ಎಂದು ನನ್ನ ದಾವಾ ಪತ್ರದಲ್ಲಿ ಹೇಳಿದ್ದೇನೆ ಸರಿಯಲ್ಲ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಕೂಡಾ ನನಗೆ ನೋಟೀಸನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನೋಟೀಸನ್ನು ನೀಡಿದ್ದರೂ ಕೂಡಾ ನನ್ನ ಚಿನ್ನದ ಅಂಗಡಿಯನ್ನು ಅಗಲ ಮಾಡಲು ಹೊರಟಿರುತ್ತೇನೆ ಎಂದರೆ ಸರಿಯಲ್ಲ. ರಾಷ್ಟ್ರೀಯ ಹೆದ್ದಾರಿ ಮತ್ತು ನನ್ನ ಅಂಗಡಿಯ ಮಧ್ಯ ರಸ್ತೆ ಮಾಡಲು ಹೊರಟಿದ್ದೇನೆ ಎಂದರೆ ಸರಿಯಲ್ಲ. ಆಗ ಸಾರ್ವಜನಿಕರು ಆಕ್ಷೇಪ ಮಾಡಿದಾಗ ರಾಷ್ಟ್ರೀಯ ಹೆದ್ದಾರಿ ಮತ್ತು ಕಂದಾಯ ಇಲಾಖೆಯವರು ನನಗೆ ನೋಟಿಸನ್ನು ನೀಡಿದ್ದಾರೆ ಎಂದರೆ ಸರಿಯಲ್ಲ. ಆನಂತರ ನಾನು ಈ ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿ.

3. ದಿಃ29-07-20122 ರಂದು ಯಾವುದೇ ಘಟನೆ ನಡೆದಿರುವುದಿಲ್ಲ ಎಂರದೆ ಸರಿಯಲ್ಲ. ಪ್ರತಿವಾದಿಗಳು ಯಾವತ್ತೂ ಕೂಡಾ ನನ್ನ ಕಟ್ಟಡಕ್ಕೆ ಅತಿಕ್ರಮವಾಗಿ ಪ್ರವೇಶ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅವರು ಅತಿಕ್ರಮ ಮಾಡಿದ ಬಗ್ಗೆ ಪೊಲೀಸ್ ಠಾಣೆಗೆ ಮತ್ತು ಕಂದಾಯ ಇಲಾಖೆಗೆ ದೂರನ್ನು ನೀಡಿರುವುದಿಲ್ಲ. 1952ನೇ ಇಸವಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಮೀಸಲಿಟ್ಟ ಜಾಗವನ್ನು ಬಿಟ್ಟುಕೊಡಬೇಕಾಗುತ್ತದೆ ಎಂದು ಈ ದಾವೆಯನ್ನು ದಾಖಲಿಸಿದ್ದೇನೆ ಎಂರದೆ ಸರಿಯಲ್ಲ. ದಾವೆಯ ಜಾಗದ ಮೇಲೆ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು ಚಿನ್ನದ ಅಂಗಡಿಯನ್ನು ಕಟ್ಟಿದ ನಂತರ ಗ್ರಾಮ ಪಂಚಾಯತ್ ನವರು ನನಗೆ ಪರವಾನಗಿಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಪರವಾನಗಿ ನೀಡಬಾರದು ಎಂದು ಗ್ರಾಮ ಪಂಚಾಯತ್ ನವರು ನಿರ್ಣಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುವುದೆಲ್ಲಾ ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇದೆ

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಬೈಂದೂರು**